ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ **29-09-2022**

**<u>ಮುಂದುವರೆದ ಮುಖ್ಯ ವಿಚಾರಣೆ ಎಪಿಪಿ ಯವರಿಂದ</u> ಃ**

ದಿನಾಂಕ **27-11-2000** ನೇ ಇಸ್ವಿಯಲ್ಲಿ ಆಪಾದಿತರ ನೇಮಕಾತಿ ಪ್ರಾಧಿಕಾರ ಯಾವುದು ಎಂದು ನಾನು ಹೆಚಡಿಎಂಸಿಯ ಆಯುಕ್ತರಿಂದ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಅದೇ ದಿನ ಮಹಾನಗರ ಪಾಲಿಕೆಯ ಆಯುಕ್ತರು ಒಂದು ಸರ್ಕಾರಿ ಆದೇಶವನ್ನು ಕೊಟ್ಟು ಎಸ ಬಿ ಗುತ್ತಲ (ಆರೋಪಿ ನಂ.1) ರವರನ್ನು ನಿವೃತ್ತಿ ಹೊಂದಿದ ನಂತರ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ನಿಯುಕ್ತಿಗೊಳಿಸಿರುವ ಆದೇಶವನ್ನು ಕೊಟ್ಟಿರುತ್ತಾರೆ. ಅದೇ ಪತ್ರದಲ್ಲಿ 3 ನೇ ಆರೋಪಿಯ ನಿಯುಕ್ತಿಯ ಬಗ್ಗೆ ಸಹ ಉಲ್ಲೇಖ ಇರುತ್ತದೆ.

ದಿನಾಂಕ **06-12-2000** ರಂದು 8 ನೇ ಆರೋಪಿಯಾದ ಎಸ ಎನ ನೂಲ್ವಿ ಪರವಾಗಿ ಮಹಾನಗರ ಪಾಲಿಕೆಯ ಕೆಲಸಕ್ಕೆ ಹಣವನ್ನು ಪಡೆದಿರುವ ಕುರಿತು ಚೆಕ್ಕಗಳನ್ನು ಪಡೆದಂತಹ ಅರವಿಂದ ಮೇಸ್ತ್ರಿ ಎಂಬ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಂಡು ನಿಧನ ಹೊಂದಿರುತ್ತಾನೆ.

ದಿನಾಂಕ **18-12-2000** ರಂದು ಮಹಾನಗರ ಪಾಲಿಕೆಯ ಒಬ್ಬ ಸಿಬ್ಬಂದಿ ಬಂದು ಆರೋಪಿ ಸಂಖ್ಯೆ 1 ರಿಂದ 4 ರವರು ಈ ಮೊದಲೇ ಸಹಿ ಮಾಡಿದ ಕಾಗದಪತ್ರಗಳನ್ನು ಹಾಜರುಪಡಿಸಿರುತ್ತಾರೆ . ಅವುಗಳನ್ನು ಪಡೆದುಕೊಂಡು ಪಂಚರಾದ ಚಾಸಾ.8 ಮತ್ತು 9 ರವರ ಸಮಕ್ಷಮ ದಾಖಲೆಗಳ ಜಪ್ತ ಪಂಚನಾಮೆ ಮಾಡಿ ವಶಪಡಿಸಿಕೊಂಡು ಅವುಗಳನ್ನು ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ಅವುಗಳು ಒಟ್ಟು 25 ದಾಖಲಾತಿಗಳು ಇರುತ್ತವೆ.

ದಿನಾಂಕ **21-12-2000** ರಂದು ಮಹಾನಗರ ಪಾಲಿಕೆಯ ಆಯುಕ್ತರಿಂದ ಒಂದು ಪತ್ರ ಬಂದಿದ್ದು ಸದರಿ ಪ್ರಕರಣದ ಎಸ ಜಿ ಲೋಕಂಡೆಯವರ ಪದನಾಮ

ಮತ್ತು ಅವರ ಕರ್ತವ್ಯದ ವಿವರಗಳು ಇರುವ ಮಾಹಿತಿಯನ್ನು ಪಡೆದಿರುತ್ತೇನೆ.

ಅದೇ ದಿನ ಮತ್ತೊಂದು ಪತ್ರವನ್ನು ಮಹಾನಗರ ಪಾಲಿಕೆಯ ಆಯುಕ್ತರಿಂದ ಪಡೆದಿರುತ್ತೇನೆ. ಸದರಿ ಪತ್ರದಲ್ಲಿ ಮುಖ್ಯ ಲೆಕ್ಕಪರಿಶೋಧಕರ ಕರ್ತವ್ಯಗಳು ಮತ್ತು ಅವರ ಜವಾಬ್ದಾರಿಗಳ ಬಗ್ಗೆ ವಿವರಗಳನ್ನು ಒಳಗೊಂಡಿರುತ್ತದೆ.

ದಿನಾಂಕ **27-12-2000** ರಂದು ಮಹಾನಗರ ಪಾಲಿಕೆಯ ಆಯುಕ್ತರಿಂದ ಮತ್ತೊಂದು ಪತ್ರ ಬಂದಿದ್ದು ಅದರಲ್ಲಿ ಆರೋಪಿ ನಂ. **5** ರಿಂದ **7** ರವರ ಸಹಿ ಮಾಡಿರುವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಪಂಚರಾದ ಚಾಸಾ.**8** ಮತ್ತು **10** ಇವರ ಸಮಕ್ಷಮ ದಾಖಲೆ ಪಂಚನಾಮೆ ಮಾಡಿ ಒಟ್ಟು **6** ದಾಖಲೆಗಳನ್ನು ಜಪ್ತ ಮಾಡಿಕೊಂಡು ಮಾಲುಪಟ್ಟಿಗೆ ಅಳವಡಿಸಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ ಸಿ, ಹುಬ್ಬಳ್ಳಿ.